# ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-2332703,
Email :musicuniversitymys@gmail.com
Website: https://www.musicuniversity.ac.in

J.L.B. Road, Near Ashoka Circle
Lakshmipuram, Mysuru – 570 004.
Ph.Office: 0821-2332703
Registrar-Mobile No.:9880761877
Email : registrar@musicuniversity.ac.in


**ವಿಷಯ:-** ವಿಶ್ವವಿದ್ಯಾಲಯದೊಡನೆ ಒಡಂಬಡಿಕೆ ಮಾಡಿಕೊಳ್ಳುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ನೊಂದಣಿ ಶುಲ್ಕಗಳನ್ನು ನಿಗದಿ ಪಡಿಸುವ ಬಗ್ಗೆ.

**ಉಲ್ಲೇಖ:-** (1) ಕೆಎಸ್‌ಜಿಎಚ್/ಸಂಪ್ರುಕವಿ/768/2023-24, ದಿನಾಂಕ : 11.04.2023ರ ಆದೇಶದಲ್ಲಿ ರಚಿಸಿದ್ದ ಶುಲ್ಕ ಪರಿಷ್ಕರಣಾ ಸಮಿತಿಯ ವರದಿಯ ದಿನಾಂಕ : 18.04.2023.
(2) ದಿನಾಂಕ : 27.04.2023ರಂದು ನಡೆದು ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಗಳಲ್ಲಿ

**<u>ಆದೇಶ ಸಂಖ್ಯೆ: ಕೆಎಸ್‌ಜಿಎಚ್/ಸಂಪ್ರುಕವಿ/ಶುಲ್ಕ ಪರಿಷ್ಕರಣೆ/872/2023-24/ದಿನಾಂಕ:29.05.2023.</u>**

ದಿನಾಂಕ : 27.04.2023 ರಂದು ಜರುಗಿದ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಯಂತೆ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದುಕೊಳ್ಳುವ ಶಿಕ್ಷಣ ಸಂಸ್ಥೆಗಳು ನಡೆಸುವ ವಿವಿಧ ಕೋರ್ಸುಗಳಿಗೆ ಈ ಕೆಳಕಂಡಂತೆ ನೊಂದಣಿ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ನಿಗದಿ ಪಡಿಸಿ 2023-24ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

| | | | |
|---|---|---|---|
| 1 | ಅರ್ಜಿ ಶುಲ್ಕ | - | ರೂ.5,000/- |
| 2 | ಸರ್ಟಿಫಿಕೇಟ್ ಕೋರ್ಸ್‌ಗಳು | - | ರೂ.15,000/ (3 ವರ್ಷಗಳ ಒಡಂಬಡಿಕೆಗೆ) |
| 3 | ಡಿಪ್ಲೊಮಾ/ಪಿಜಿ ಡಿಪ್ಲೊಮಾ ಕೋರ್ಸ್‌ಗಳು | - | ರೂ.25,000/- (3 ವರ್ಷಗಳ ಒಡಂಬಡಿಕೆಗೆ) |
| 4 | ಪದವಿ ಕೋರ್ಸುಗಳಿಗೆ | - | ರೂ.50,000/- (3 ವರ್ಷಗಳ ಒಡಂಬಡಿಕೆಗೆ) |
| 5 | ಸ್ನಾತಕೋತ್ತರ ಕೋರ್ಸುಗಳಿಗೆ | - | ರೂ.75,000/- (3 ವರ್ಷಗಳ ಒಡಂಬಡಿಕೆಗೆ) |
| 6 | ಪಿ.ಹೆಚ್‌ಡಿ ಕೋರ್ಸ್ ನಡೆಸುವ ಸಂಶೋಧನಾ ಕೇಂದ್ರಗಳಿಗೆ | - | ರೂ.1,00,000/- (3 ವರ್ಷಗಳಿಗೆ ಮಾತ್ರ) |

**ನಂತರ ನಿಗಧಿತ ಶುಲ್ಕ ಪಾವತಿ ಮಾಡಿ ನವೀಕರಣ ಪಡೆದುಕೊಳ್ಳಬೇಕು.**

ಮಾನ್ಯತೆ ನೀಡುವ ಸಲುವಾಗಿ ಸಂಸ್ಥೆಗಳಲ್ಲಿನ ಮೂಲಸೌಕರ್ಯ ಮತ್ತು ಬೋಧಕ ವೃಂದದ ನೇಮಕಾತಿಗಳ ಬಗ್ಗೆ ಪರಿಶೀಲನೆ ನಡೆಸಲು ಸಂಸ್ಥೆಗೆ ಭೇಟಿ ನೀಡುವ ತಜ್ಞರ ಸಮಿತಿಯ ಸದಸ್ಯರುಗಳ ವಾಹನಭತ್ಯೆ ಮತ್ತು ಇತರೆ ಭತ್ಯೆಗಳನ್ನು ಮಾನ್ಯತೆ ಪಡೆಯಬಯಸುವ ಸಂಸ್ಥೆಗಳು ತಜ್ಞರುಗಳು ಭೇಟಿ ನೀಡಿದ ಸಂದರ್ಭದಲ್ಲೇ ನಿಯಮಾನುಸಾರ ಪಾವತಿಸಬೇಕು. **ಹಾಗೂ** ಮಾನ್ಯತೆ ಪಡೆದ ನಂತರ ಸಂಸ್ಥೆಗಳು ನಡೆಸಬೇಕಾಗಿರುವ "Managing Council" ಸಭೆಯ ಸದಸ್ಯರುಗಳ ವಾಹನಭತ್ಯೆ ಮತ್ತು ಇತರೆ ಭತ್ಯೆಗಳನ್ನು ಸಹಾ ಸಭಾ ದಿನಗಳಂದೇ ಸಂಬಂಧಿಸಿದ ಸಂಸ್ಥೆಗಳು ನಿಯಮಾನುಸಾರ ಪಾವತಿಸಬೇಕು.

ಮುಂದುವರಿದು ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು "Managing Council" ಸಭೆಯಲ್ಲಿ ಚರ್ಚಿಸಿ ವಿದ್ಯಾರ್ಥಿಗಳಿಗೆ ನಿಗದಿಪಡಿಸುವ ಪ್ರವೇಶ ಶುಲ್ಕ ಮತ್ತು ಇತರ ಶುಲ್ಕಗಳ ಶೇಕಡ 25% ರಷ್ಟು ಮೊತ್ತವನ್ನು ವಿಶ್ವವಿದ್ಯಾಲಯದ ಖಾತೆಗೆ ವರ್ಗಾಯಿಸುವುದು ಹಾಗೂ ವಿಶ್ವವಿದ್ಯಾಲಯ ನಿಗದಿ ಪಡಿಸುವ ಪರೀಕ್ಷಾ ಶುಲ್ಕಗಳ ಪೂರ್ತಿ ಮೊತ್ತವನ್ನು ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಲು ಸಂಬಂಧಿಸಿದ ಸಂಸ್ಥೆಗಳು ಕ್ರಮ ತೆಗೆದುಕೊಳ್ಳಬೇಕು.

ಆದೇಶದ ಮೇರೆಗೆ,

[signature] 4/1/23

ಕುಲಸಚಿವರು

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

**ಪ್ರತಿಗಳು:**

1. ಹಣಕಾಸು ಅಧಿಕಾರಿಗಳು, ಕ.ರಾ.ಗಂ.ಹಾ.ಸಂ.ಮತ್ತು ಪ್ರ.ಕ. ವಿಶ್ವವಿದ್ಯಾಲಯ, ಮೈಸೂರು.
2. ಅಪರ ನಿರ್ದೇಶಕರು, ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು.
3. ಕಛೇರಿ ಪ್ರತಿ.